ತತ್ತರಿಸುತ್ತಿರುವಾಗ ಮಾತೃವಾತ್ಸಲ್ಯದ ಮಹಾಪೂರವಾದ ಅಮ್ಮ ಜಗತ್ತಿಗೇ ಸಾಂತ್ವನ ಸಮಾಧಾನಗಳ ತಂಪನ್ನೆರೆಯುತ್ತಿದ್ದಾರೆ.

ಅಮ್ಮನ ಪ್ರಕಾರ ಇಂದಿನ ಎಲ್ಲ ಸಮಸ್ಯೆಗಳಿಗೂ ಕಾರಣ ಪ್ರೇಮ ಕರುಣೆಗಳು ಕಣ್ಮರೆಯಾಗಿರುವುದೇ ಆಗಿದೆ. ಮನುಷ್ಯರ ಹೆಚ್ಚಿನ ಸಮಸ್ಯೆಗಳಿಗೆ ಆಧುನಿಕ ಮನೋವಿಜ್ಞಾನವೂ 'ನಿಸ್ವಾರ್ಥ ಪ್ರೇಮದ ಕೊರತೆಯೇ ಕಾರಣ' ಎನ್ನುತ್ತಿದೆ. ಮನುಷ್ಯಮನಸ್ಸಿನಲ್ಲಿ ಶಾಂತಿ ಸಮಾಧಾನಗಳು ಉಂಟಾಗದ ಹೊರತು ಹೊರಜಗತ್ತಿನಲ್ಲಿ ಅವು ದೊರಕುವುದಿಲ್ಲ ಎಂದು ಜಗತ್ತೂ ಅರಿತುಕೊಂಡಿದೆ. ಮನೋವಿಜ್ಞಾನವು ಎತ್ತಿಹಿಡಿಯುವ ಅಹೈತುಕ ಪ್ರೇಮ (unconditional love), ಮಾತೃವಾತ್ಸಲ್ಯ, ಕರುಣೆ, ಮುಂತಾದ ಮೌಲ್ಯಗಳನ್ನು ಜಗತ್ತಿನಾದ್ಯಂತ ವ್ಯಕ್ತಿ ವ್ಯಕ್ತಿಗೂ ನೀಡಿ, ಸಮೂಹ ಮನಸ್ಸಿನ ಆರೋಗ್ಯಕ್ಕೂ ತನ್ಮೂಲಕ ಜಗತ್ತಿನ ಆರೋಗ್ಯಕ್ಕೂ ಪುಷ್ಟಿ ಒದಗಿಸಲು ಅಮ್ಮ ತಮ್ಮ ಜೀವನವನ್ನು ಅರ್ಪಿಸಿಕೊಂಡಿದ್ದಾರೆ.

ನಾಲ್ಕೂವರೆ ದಶಕಗಳಿಂದಲೂ ಜನರ ಸುಖದುಃಖಗಳಿಗೆ ಮಿಡಿಯುತ್ತಾ, ವರ್ಷಕ್ಕೆ 8 ತಿಂಗಳ ಕಾಲ ದೇಶವಿದೇಶಗಳಲ್ಲಿ ಅವಿರತವಾಗಿ ಯಾತ್ರೆ ಮಾಡುತ್ತಾ, ಪ್ರಪಂಚದ ಎಲ್ಲರನ್ನು ತಮ್ಮ ಸಂತಾನವೆಂದು ಭಾವಿಸಿ, ಲಕ್ಷಾಂತರ ಜನರನ್ನು –ಬಡವರು ಬಲ್ಲಿದರು, ರೋಗಿಗಳು ರೋಗಮುಕ್ತರು ಎನ್ನದೆ, ಅಥವಾ ದೇಶ, ಭಾಷೆ, ಜಾತಿ, ಜನಾಂಗ, ವರ್ಗ, ವರ್ಣ, ಲಿಂಗ, ವಯಸ್ಸು– ಈ ಯಾವ ಭೇದವನ್ನೂ ಮಾಡದೆ ಪ್ರತಿಯೊಬ್ಬರನ್ನೂ ನಿಜಬಾಹುಗಳಲ್ಲಿ ಸ್ವೀಕರಿಸಿಕೊಂಡು, ಎಲ್ಲರ ಪ್ರೀತಿಗೆ ಪಾತ್ರರಾಗಿರುವ ಅಮ್ಮ 'ವಿಶ್ವಮಾತೃತ್ವ'ದ ಸಾಕಾರವೆನಿಸಿದ್ದಾರೆ.

'ನನ್ನ ಜೀವನವೇ ನನ್ನ ಸಂದೇಶ' ಎಂದು ಸಾರುವ ಅಮ್ಮನ ಜೀವನ ರೀತಿಗೆ ಉಪಮೆಗಳಿಲ್ಲ. ಆಧುನಿಕ ಪ್ರಪಂಚದಲ್ಲಿ ವ್ಯಕ್ತಿಯ ಸಫಲತೆಗೆ ಕಾರಣಗಳನ್ನು ಪಟ್ಟಿಮಾಡಿ ಹೇಳುವುದುಂಟು; ಅಮ್ಮನ ವಿಷಯದಲ್ಲಿ ಅಂಥ ಯಾವ ಒಂದು ಅಂಶವೂ ಕೂಡಿಬಂದಿಲ್ಲ. ಅಮ್ಮ ಹುಟ್ಟಿದ್ದು ನಗರದಲ್ಲಲ್ಲ, ಅಜ್ಞಾತ ದ್ವೀಪದ ಪುಟ್ಟ ಹಳ್ಳಿಯಲ್ಲಿ. ಹೆಣ್ಣುಮಗುವಾಗಿ. ಅದೂ ದಷ್ಟಪುಷ್ಟವಾದ ಕೆಂಪುಗಲ್ಲದ ಮಗುವಾಗೇನಲ್ಲ. ತಂದೆತಾಯಿಯರು ವಿದ್ಯಾವಂತರೂ ಅಲ್ಲ, ಆಗರ್ಭ ಶ್ರೀಮಂತರೂ ಅಲ್ಲ. ಸಂಬಂಧಿಕರಲ್ಲಿ ಪ್ರಭಾವೀ ವ್ಯಕ್ತಿಗಳು ಯಾರೂ ಇಲ್ಲ. ಓದಿದ್ದು ಮಲಯಾಳ ಮಾಧ್ಯಮದಲ್ಲಿ, ಕೇವಲ ನಾಲ್ಕನೆ ತರಗತಿವರೆಗೆ. ಹೀಗಿದ್ದೂ ಅಮ್ಮನ ಆಂತರಿಕ ಶಕ್ತಿ ಅಥವಾ ಆತ್ಮಶಕ್ತಿಯ ವಿಶ್ವಾತ್ಮಕ ವಿಕಾಸಕ್ಕೆ ಇದ್ಯಾವುದೂ ಬಾಧಕವಾಗಲಿಲ್ಲ.

## ಅಮೃತಗಾಥೆ

**ಜನನ:** ಒಂದು ಕಡೆ ಅಗಾಧ ನೀಲಸಾಗರ; ಮತ್ತೊಂದು ಕಡೆ ಮಂದವಾಗಿ ಹರಿವ ಹಸಿರು ಹಿನ್ನೀರು ಕಾಲುವೆ; ನಡುವೆ ಘನವೃಕ್ಷಸಂಪತ್ತು ಹೊತ್ತ ನೀಳವಾದ ದ್ವೀಪ. ಇಲ್ಲಿನ ನಿವಾಸಿಗಳು ಬೆಸ್ತರು. ಸರಳ ಜೀವಿಗಳು. ಪ್ರಕೃತಿಮಾತೆಯ ಮಡಿಲಾದ ಆ ದ್ವೀಪದ ಹೆಸರು ಪರಯಕಡವು. ರಾಜ್ಯ ಕೇರಳ. ಇಂದು ಜಗದ್ವಿಖ್ಯಾತ ಅಮೃತಪುರಿ.

ಅಂದು 1953ರ ಸೆಪ್ಟೆಂಬರ್ 27. ಕಾರ್ತಿಕ ನಕ್ಷತ್ರದ ದಿನ. ಬೆಳಿಗ್ಗೆ 9 ಗಂಟೆ ಸುಮಾರಿಗೆ ಇಡೀ ಮನುಕುಲಕ್ಕೆ ದಿವ್ಯಪ್ರೇಮದ ಅಮೃತವರ್ಷವನ್ನೇ ಕರೆಯಲೆಂದು 'ಅಮ್ಮ' ಜನಿಸಿ ಬಂದರು.

ಪ್ರಸವವೇದನೆಯನ್ನೇ ಕೊಡದೆ ಹುಟ್ಟಿಬಂದ, ಭವಿಷ್ಯದಲ್ಲಿ ವಿಶ್ವಕ್ಕೇ ಶಾಂತಿ ಪ್ರೇಮಗಳನ್ನು ನೀಡಲಿದ್ದ ಆ ಹೆಣ್ಣುಮಗು, ಮೊದಲಬಾರಿ ತನ್ನತ್ತ ನೋಡಿದ ತಾಯಿಗೆ ನೀಡಿದ್ದು ಸುಂದರ ಅವಿಸ್ಮರಣೀಯ ಮುಗುಳ್ನಗೆಯನ್ನು! ಜನ್ಮದ ಉದ್ದೇಶದ ಪೂರ್ಣ ಅರಿವನ್ನು ಹೊಂದಿದ್ದ ದಿವ್ಯಶಿಶುವಿನ ಕೈಗಳು ಚಿನ್ಮುದ್ರೆಯಲ್ಲಿದ್ದವು; ಮೊಣಕಾಲು ಮಡಚಿಕೊಂಡಿದ್ದವು. ಅಮ್ಮ ಲೋಕದಲ್ಲಿ ಪದಾರ್ಪಣೆ ಮಾಡಿದ್ದು ಹೀಗೆ, ಯೋಗೇಶ್ವರಿಯಾಗಿ! ಕರ್ಮಬಂಧಿಗಳಾದ ನಮ್ಮ ನಿಮ್ಮಂತೆ ಅಳುತ್ತಾ ಹುಟ್ಟಲಿಲ್ಲ.

**ಬಾಲ್ಯ:** ಯಾರೂ ಕಲಿಸದಿದ್ದರೂ ಸುಧಾಮಣಿಯು ಬಾಲ್ಯದಲ್ಲೇ ದಿವ್ಯಗುಣಗಳನ್ನು ತೋರುತ್ತಿದ್ದಳು. ಅಪಾರವಾದ ದೈವಭಕ್ತಿಯೂ ಅನನ್ಯವಾದ ಪರೋಪಕಾರ ಬುದ್ಧಿಯೂ ಅವಳಲ್ಲಿ ತಾನಾಗಿ ಸ್ಫುರಿಸುತ್ತಿದ್ದವು. 'ಭಕ್ತಿಯೂ ಸೇವೆಯೂ ಅನ್ಯವಲ್ಲ' ಎಂದು ಇಂದು ಬೋಧಿಸುವ ಅಮ್ಮ ಬಾಲ್ಯದಲ್ಲೇ ಅದನ್ನು ಆಚರಿಸುತ್ತಿದ್ದರು.

ಬಾಲಕಿಯು ಸದಾ ಕೃಷ್ಣನನ್ನು ಕುರಿತು ಚಿಂತಿಸುತ್ತಿದ್ದಳು. ಕೃಷ್ಣನ ಕುರಿತು ಹಾಡು ರಚಿಸಿಕೊಂಡು, ಹಾಡುತ್ತಾ ನರ್ತಿಸುತ್ತಾ ಆನಂದದಲ್ಲಿ



Amma teaches us that we should, at least, start with tolerance. And then we have to evolve on to respect, and from respect on to love. When we do that, all problems are solved. With Amma, I believe we can together create a world filled with real cooperation, love, truth and justice.

**-Rabbi Awraham Soetendorp**

Former President of the Jewish Institute for Jewish values




**ಪೋಪ್ ಫ್ರಾನ್ಸಿಸ್ ಅವರೊಂದಿಗೆ ಅಮ್ಮ**